# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ಸಂಖ್ಯೆ: 16 ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052

## ಪತ್ರಿಕಾ ಪ್ರಕಟಣೆ

## 2018–19ನೇ ಸಾಲಿನ ವಿದ್ಯುಚ್ಛಕ್ತಿದರ ಪರಿಷ್ಕರಣೆ:

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಆರ್ಥಿಕ ವರ್ಷ 2018–19ರ (1ನೇ ಏಪ್ರಿಲ್, 2018 ರಿಂದ 31ನೇ ಮಾರ್ಚ್, 2019 ರವರೆಗೆ) ವಿದ್ಯುಚ್ಛಕ್ತಿ ದರಗಳ ಪರಿಷ್ಕರಣೆಯನ್ನು ಅನುಮೋದಿಸಿದೆ. ಆಯೋಗವು ಮಂಗಳೂರು ವಿಶೇಷ ಆರ್ಥಿಕ ವಲಯ (MSEZ) ಮಂಗಳೂರು ಮತ್ತು ಬೆಳಗಾವಿ ಜಿಲ್ಲೆಯಲ್ಲಿನ ಏಕಸ್ ವಿಶೇಷ ಆರ್ಥಿಕ ವಲಯ(AEQUS SEZ)ಗಳ ಗ್ರಾಹಕರಿಗೆ ಅನ್ವಯವಾಗುವ ಪರಿಷ್ಕೃತ ಚಿಲ್ಲರೆ ವಿದ್ಯುಚ್ಛಕ್ತಿ ದರಗಳನ್ನೂ ಸಹ ನಿರ್ಧರಿಸಿದೆ. ಆರ್ಥಿಕ ವರ್ಷ 2018–19 ರಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಿಂದ ಕ.ವಿ.ಪ್ರ.ನಿ.ನಿ. (KPTCL)ವಸೂಲಿ ಮಾಡಬೇಕಾದ ವಿದ್ಯುಚ್ಛಕ್ತಿ ಪ್ರಸರಣ ದರಗಳನ್ನೂ ಸಹ ಪರಿಷ್ಕರಿಸಲಾಗಿದೆ. ಈ ಪರಿಷ್ಕೃತ ದರಗಳು ದಿನಾಂಕ:01.04.2018 ಅಥವಾ ಅದರ ನಂತರದ ಮೊದಲನೆಯ ಮೀಟರ್ ಓದುವ ದಿನಾಂಕದಿಂದ ಬಳಕೆಮಾಡಿದ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತವೆ.

ವಿದ್ಯುತ್ ಸರಬರಾಜು ಕಂಪನಿಗಳು ಈ ಮುಂದಿನಂತೆ ಎಲ್ಲಾ ಪ್ರವರ್ಗಗಳ ಗ್ರಾಹಕರಿಗೆ ಪ್ರತಿ ಯೂನಿಟ್ಟಿಗೆ **82 ರಿಂದ 162** ಪೈಸೆಗಳ **ವಿಭಿನ್ನ** ಏರಿಕೆಯನ್ನು ಕೋರಿದ್ದವು:

| ವಿದ್ಯುತ್ ಸರಬರಾಜು ಕಂಪನಿಯ ಹೆಸರು | ಏರಿಕೆ ಪ್ರತಿ ಯೂನಿಟ್ಟಿಗೆ | ಶೇಕಡ ಏರಿಕೆ |
|---|---|---|
| ಬೆಸ್ಕಾಂ | 82 | 13 |
| ಮೆಸ್ಕಾಂ | 123 | 19 |
| ಸೆಸ್ಕ್ | 113 | 18 |
| ಹೆಸ್ಕಾಂ | 123 | 19 |
| ಜೆಸ್ಕಾಂ | 162 | 26 |

ರಾಜ್ಯದಲ್ಲಿ ಇದುವರೆವಿಗೂ ಏಕರೂಪದ ವಿದ್ಯುಚ್ಛಕ್ತಿ ದರಗಳು ರೂಢಿಯಲ್ಲಿರುವುದರಿಂದ, ಆಯೋಗವು ಬೆಸ್ಕಾಂ ಪ್ರದೇಶದಲ್ಲಿ ಸ್ವಲ್ಪ ಪ್ರಮಾಣದಲ್ಲಿ ವಿಭಿನ್ನವಾದ ಏರಿಕೆಯೊಂದಿಗೆ ಮಿಕ್ಕೆಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಏಕರೂಪದ ಏರಿಕೆಯನ್ನು ಅನುಮೋದಿಸಿದೆ ಮತ್ತು ವಿವಿಧ ಹಂತಗಳಲ್ಲಿನ ವಿದ್ಯುತ್ ದರಗಳ ಏರಿಕೆ ಪ್ರತಿ ಯೂನಿಟ್‌ಗೆ 15 ಪೈಸೆಯಿಂದ 30 ಪೈಸೆಯವರೆಗೆ ಇರುತ್ತದೆ. ಬೆಸ್ಕಾಂಗೆ ಸಂಬಂಧಪಟ್ಟಂತೆ ನಿಗದಿತ ಶುಲ್ಕ ಸೇರಿದಂತೆ ವಿದ್ಯುಚ್ಛಕ್ತಿ ದರದಿಂದ ವಸೂಲಿಯಾಗುವ ಮೊತ್ತದಲ್ಲಿ ಸರಾಸರಿ ಪ್ರತಿ ಯೂನಿಟ್‌ಗೆ 38 ಪೈಸೆಗಳ ಮತ್ತು ಶೇಕಡ 5.93ರ ಏರಿಕೆ ಇರುತ್ತದೆ. ಬೆಸ್ಕಾಂನ್ನು ಹೊರತು ಪಡಿಸಿ, ಇತರ ಎಲ್ಲಾ ಎಸ್ಕಾಂಗಳಲ್ಲಿ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ಸರಾಸರಿ 30 ಪೈಸೆಗಳ ಮತ್ತು ಶೇಕಡ 4.69ರ ಏರಿಕೆ ಇರುತ್ತದೆ. ಒಟ್ಟಾರೆ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ದರಗಳಲ್ಲಿ ಶೇಕಡ 5.3ರ ಏರಿಕೆಯಾಗಿರುತ್ತದೆ.

ಹಾಲಿ ಇರುವ ವಿದ್ಯುಚ್ಛಕ್ತಿ ದರಗಳ ವ್ಯವಸ್ಥೆಯಲ್ಲಿ ಗ್ರಾಹಕರಿಂದ ವಸೂಲಿಯಾಗುವ ನಿಗದಿತ ಶುಲ್ಕ (fixed charges) ವಿದ್ಯುತ್ ಸರಬರಾಜು ಕಂಪನಿಗಳ ವಾಸ್ತವ ನಿಗದಿತ ಖರ್ಚಿಗೆ (fixed cost) ಸಮನಾಗಿರುವುದಿಲ್ಲ. ನಿಗದಿತ ಖರ್ಚಿನ ಒಂದು ಭಾಗವನ್ನು ಮಾತ್ರ ನಿಗದಿತ ಶುಲ್ಕವೆಂದು ವಸೂಲಿ ಮಾಡಲಾಗುತ್ತಿದೆ. ನಿಗದಿತ ಖರ್ಚಿನ ಶೇಕಡ 28.56 ರಷ್ಟು ಮಾತ್ರ ಹಾಲಿ ವಸೂಲಿಯಾಗುತ್ತಿದ್ದು, ಬಾಕಿ ನಿಗದಿತ ಖರ್ಚನ್ನು ವಿದ್ಯುಚ್ಛಕ್ತಿ ಶುಲ್ಕದ ಮೂಲಕ ವಸೂಲು ಮಾಡಲಾಗುತಿರುತ್ತದೆ. ಆದುದರಿಂದ ನಿಗದಿತ ಶುಲ್ಕವನ್ನು ವರ್ಷದಿಂದ ವರ್ಷಕ್ಕೆ ಕ್ರಮೇಣವಾಗಿ ಹೆಚ್ಚಿಸಲು ಆಯೋಗವು ನಿರ್ಧರಿಸಿರುತ್ತದೆ. ಅದರಂತೆ ಆಯೋಗವು ಎಲ್ಲಾ ಎಲ್.ಟಿ. ಸ್ಥಾವರಗಳಿಗೆ ಸಂಬಂಧಪಟ್ಟಂತೆ ನಿಗದಿತ ಶುಲ್ಕವನ್ನು ಪ್ರತಿ ಕಿ.ವ್ಯಾ. / ಹೆಚ್.ಪಿ. / ಕೆ.ವಿ.ಎ.ಗೆ ರೂ.5/- ರಿಂದ ರೂ.10 ರವರೆಗಿನ ಕನಿಷ್ಠ ಏರಿಕೆಯನ್ನು ಅನುಮೋದಿಸಿದೆ.

ಹೆಚ್.ಟಿ. ಸ್ಥಾವರದ ಗ್ರಾಹಕರುಗಳಿಗೆ ಸಂಬಂಧಪಟ್ಟಂತೆ ವಿದ್ಯುತ್ ಸರಬರಾಜು ಕಂಪನಿಗಳ ವಾಸ್ತವ ನಿಗದಿತ ಖರ್ಚಿಗೆ ಸಮವಾಗಿ ನಿಗದಿತ ಶುಲ್ಕ ವಸೂಲಿಯಾಗದಿರುವುದನ್ನು ಪರಿಗಣಿಸಿ, ಅವರುಗಳ ಕೋರಿಕೆಯಂತೆ, ಬಿಲ್ಲಿಂಗ್ ಡಿಮ್ಯಾಂಡ್‌ನ್ನು ಕಾಂಟ್ರಾಕ್ಟ್ ಡಿಮ್ಯಾಂಡ್‌ನ ಶೇಕಡ 75ರ ಬದಲಾಗಿ ಶೇಕಡ 85ಕ್ಕೆ ಏರಿಸುವುದನ್ನು ಅನುಮೋದಿಸಲಾಗಿದೆ.

ಆರ್ಥಿಕ ವರ್ಷ 2017 ರ ಕಾರ್ಯ ನಿರ್ವಹಣೆ ಪುನರ್ಮನನ ಮತ್ತು ಆರ್ಥಿಕ ವರ್ಷ 2019ರ ವಾರ್ಷಿಕ ಕಂದಾಯ ಬೇಡಿಕೆಯ ಪರಿಷ್ಕರಣೆಯಂತೆ ವಿದ್ಯುತ್ ಖರೀದಿ ಖರ್ಚಿನಲ್ಲಿನ ಹೆಚ್ಚಳ ಮತ್ತು ಆರ್ಥಿಕ ವರ್ಷ 2017 ಮತ್ತು ಆರ್ಥಿಕ ವರ್ಷ 2019 ಗಳಲ್ಲಿ ಮಳೆಯ ಅಭಾವದಿಂದಾಗಿ ಜಲಸಂಪನ್ಮೂಲ ಸ್ಥಾವರಗಳಿಂದ ಕಡಿಮೆ ಪ್ರಮಾಣದಲ್ಲಿ ವಿದ್ಯುತ್ ಲಭ್ಯತೆಯಿಂದಾಗಿ ಅದರ ಬದಲಾಗಿ ಹೊಸ ಉಷ್ಣ ವಿದ್ಯುಚ್ಛಕ್ತಿ ಉತ್ಪಾದನಾ ಘಟಕಗಳಿಂದ ಹೆಚ್ಚಿನ ಬೆಲೆಯ ವಿದ್ಯುತ್ ಖರೀದಿಯಿಂದಾದ ರೂ.2485.62 ಕೋಟಿಗಳ ಕಂದಾಯ ಕೊರತೆ ಕಾರಣದಿಂದಾಗಿ, ವಿದ್ಯುತ್ ದರಗಳ ಏರಿಕೆ

ಅಗತ್ಯವಾಗಿರುತ್ತದೆ. ಮೇಲಿನ ಕಾರಣಗಳಿಂದಾಗಿ ಆರ್ಥಿಕ ವರ್ಷ 2018–19ರಲ್ಲಿ ವಿದ್ಯುಚ್ಛಕ್ತಿ ಖರೀದಿ ವೆಚ್ಚದಲ್ಲಿ ಪ್ರತಿ ಯೂನಿಟ್ಟಿಗೆ 23 ಪೈಸೆಯಷ್ಟು ಏರಿಕೆಯಾಗಿರುತ್ತದೆ.

**ಹೊಸ ದರ ಆದೇಶದ ಪ್ರಮುಖ ಅಂಶಗಳು:**

- ಹೆಚ್.ಟಿ. ಗ್ರಾಹಕರಿಗೆ ವಿಶೇಷ ಪ್ರೋತ್ಸಾಹ ಯೋಜನೆ (Special Incentive Scheme): ಹೆಚ್.ಟಿ. ಗ್ರಾಹಕರಿಗೆ ಅವರ ಮೂಲ ಬಳಕೆಗಿಂತ ಹೆಚ್ಚಾಗಿ 10.00 ಘಂಟೆಯಿಂದ 18.00 ಘಂಟೆಗಳ ಸಮಯದಲ್ಲಿ ಬಳಸಿದ ವಿದ್ಯುಚ್ಛಕ್ತಿಗೆ ಪ್ರತಿ ಯೂನಿಟ್ಟಿಗೆ ರೂ.1/–ರಂತೆ ಪ್ರೋತ್ಸಾಹ (incentive) ಮತ್ತು ರಾತ್ರಿ ವೇಳೆ ಅಂದರೆ 22.00 ಘಂಟೆಯಿಂದ 6.00 ಘಂಟೆಗಳ ಸಮಯದಲ್ಲಿ ಎಲ್ಲಾ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್ಟಿಗೆ ರೂ.2/–ರಂತೆ, ಪ್ರೋತ್ಸಾಹ (incentive) ನೀಡಲಾಗುವ ಒಂದು ವಿಶೇಷ ಪ್ರೋತ್ಸಾಹ ಯೋಜನೆಯನ್ನು ತರಲಾಗಿರುತ್ತದೆ. ಆದರೆ 6.00 ಘಂಟೆಯಿಂದ 10.00 ಘಂಟೆಯವರೆಗಿನ ಬೆಳಗಿನ ಗರಿಷ್ಠ ಸಮಯ (Peak hour) ಮತ್ತು 18.00 ಘಂಟೆಯಿಂದ 22.00 ಘಂಟೆಯವರೆಗಿನ ಸಾಯಂಕಾಲದ ಗರಿಷ್ಠ ಸಮಯದಲ್ಲಿ ವಿದ್ಯುಚ್ಛಕ್ತಿ ಬಳಕೆಗೆ ToD (Time of Day) ದರವನ್ನು (ಪ್ರತಿ ಯೂನಿಟ್‌ಗೆ ರೂ.1/–ರಂತೆ ವಿಧಿಸುವ ದಂಡ) ಮುಂದುವರೆಸಲಾಗಿದೆ.
- ಆಯೋಗವು ಬೆಂಗಳೂರು ಮೆಟ್ರೊಗೆ ಈಗಿರುವ ಪ್ರಸ್ತುತ ದರದಲ್ಲಿ ಪ್ರತಿ ಯೂನಿಟ್ಟಿಗೆ ರೂ.1/–ರಷ್ಟು ಕಡಿತ ಮಾಡಿ ಪ್ರತಿ ಯೂನಿಟ್ಟಿಗೆ ರೂ.5/–ರ ರಿಯಾಯಿತಿ ದರವನ್ನು ಅನುಮೋದಿಸಿದೆ. ಅವರಿಗೆ ToD (Time of Day) ಮತ್ತು ಸ್ಪೆಷಲ್ ಇನ್ಸೆಂಟೀವ್ ಸ್ಕೀಮ್ ಲಭ್ಯವಿರುವುದಿಲ್ಲ.
- ಹಸಿರು ಶಕ್ತಿ ಬಳಕೆ ಮತ್ತು ಇಂಗಾಲಾಮ್ಲ ಉತ್ಪತ್ತಿ ಕಡಿತ ಮಾಡುವ ರೈಲ್ವೆ ಟ್ರಾಕ್ಷನ್ ವಿದ್ಯುದೀಕರಣವನ್ನು ಪ್ರೋತ್ಸಾಹಿಸಲು ರೈಲ್ವೆ ಟ್ರಾಕ್ಷನ್‌ಗೆ ದಿನದ 24 ಘಂಟೆ, ಪ್ರತಿ ಯೂನಿಟ್ಟಿಗೆ ರೂ.6/– 40 ಪೈಸೆ ರಿಯಾಯಿತಿ ದರವನ್ನು ಆಯೋಗವು ಅನುಮೋದಿಸಿದೆ. ಅವರಿಗೆ ToD (Time of Day) ಮತ್ತು ಸ್ಪೆಷಲ್ ಇನ್ಸೆಂಟೀವ್ ಸ್ಕೀಮ್ ಲಭ್ಯವಿರುವುದಿಲ್ಲ.
- ಗ್ರಾಹಕರ ವಿದ್ಯುತ್ ಸ್ಥಾವರಗಳ (Installations) ಆವರಣದಲ್ಲಿ ಸ್ಥಾಪಿತವಾದ ಎಫ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್‌ಗಳಿಗೆ ಮತ್ತು ಕೊಳಚೆ ನೀರು ಶುದ್ಧೀಕರಿಸುವ ಘಟಕಗಳಿಗೆ, ಆ ಸ್ಥಾವರಗಳಿಗೆ ಅನ್ವಯವಾಗುವ ವಿದ್ಯುತ್ ದರ ಅನ್ವಯವಾಗುತ್ತದೆ.

- ಆಯೋಗವು ಘನತ್ಯಾಜ್ಯ ಸಂಸ್ಕರಣೆಯಿಂದಾಗುವ ಪರಿಸರ ಮತ್ತು ಸಾಮಾಜಿಕ ಅನುಕೂಲಗಳನ್ನು ಪರಿಗಣಿಸಿ, ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ (Solid waste processing plants), ಎಲ್.ಟಿ. ಮತ್ತು ಹೆಚ್.ಟಿ. ಕೈಗಾರಿಕಾ ವರ್ಗದ ದರವನ್ನು ಅನುಮೋದಿಸಿದೆ.
- ಗ್ರಾಹಕರ ಸಮಸ್ಯೆಯನ್ನು ಕಾಲ ಮಿತಿಯೊಳಗೆ ಪರಿಹರಿಸಲು, ಆಯೋಗವು ತನ್ನ ಹಿಂದಿನ ನಿರ್ದೇಶನವನ್ನು ಪುನರುಚ್ಚರಿಸುತ್ತಾ, ವಿದ್ಯುತ್ ಸರಬರಾಜು ಕಂಪನಿಗಳು ಪ್ರತಿ ಉಪವಿಭಾಗದಲ್ಲಿ ಗ್ರಾಹಕ ಸಂಪರ್ಕ ಸಭೆಗಳನ್ನು ಸಂಬಂಧಿಸಿದ ಅಧೀಕ್ಷಕ ಇಂಜಿನಿಯರು ಅಥವಾ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಸುವಂತೆ ನಿರ್ದೇಶಿಸಿದೆ. ಅಂಥ ಸಭೆಗಳನ್ನು ನಡೆಸಲು ವಿಫಲವಾದಲ್ಲಿ, ಆಯೋಗವು ಪ್ರತಿ ಉಪವಿಭಾಗಕ್ಕೆ ಒಂದು ಲಕ್ಷ ರೂಪಾಯಿಯವರೆಗೂ ದಂಡ ಹಾಕಲಿದೆ, ಹಾಗೂ ಅಂಥ ದಂಡವನ್ನು ಸಂಬಂಧಪಟ್ಟ ಅಧಿಕಾರಿಯು ಪಾವತಿ ಮಾಡಬೇಕಾಗುತ್ತದೆ.

ಆಯೋಗವು, ಬಹುವರ್ಷ ವಿದ್ಯುಚ್ಛಕ್ತಿ ದರ (MYT) ವಿನಿಯಮಗಳಡಿಯ ತತ್ವಗಳ ಪ್ರಕಾರ ಆರ್ಥಿಕ ವರ್ಷ 2019ರ ಪರಿಷ್ಕೃತ ವಾರ್ಷಿಕ ಕಂದಾಯ ಅಗತ್ಯತೆಯನ್ನು ನಿರ್ಧರಿಸಿದೆ. ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ವರ್ಷ 2017ರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನವನ್ನು ಸಹ ಆಯೋಗವು ಕೈಗೊಂಡಿದೆ ಮತ್ತು ಅದರಲ್ಲಿನ ಕೊರತೆ ಹೆಚ್ಚಳಗಳನ್ನು ಆರ್ಥಿಕ ವರ್ಷ 2019 ರ ಪರಿಷ್ಕೃತ ವಾರ್ಷಿಕ ಕಂದಾಯ ಅಗತ್ಯತೆಯಲ್ಲಿ ಪರಿಗಣಿಸಲಾಗಿದೆ.

ಆಯೋಗವು, ತಾನು ಹಿಂದಿನ ಆದೇಶಗಳಲ್ಲಿ ನೀಡಿದ್ದ ನಿರ್ದೇಶನಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳ ಪರಿಪಾಲನೆಯನ್ನು ಸಹಾ ಪರಿಶೀಲಿಸಿದೆ.

## ಆರ್ಥಿಕ ವರ್ಷ 2019 ರ ವಿದ್ಯುತ್ ದರ ಆದೇಶ 2018 ರ ಪ್ರಮುಖ ಅಂಶಗಳು:

### ಗೃಹಬಳಕೆ ಗ್ರಾಹಕರಿಗೆ ಅನ್ವಯವಾಗುವ ದರಗಳು:

**ಬೆಸ್ಕಾಂ ವ್ಯಾಪ್ತಿಯ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರೆ ಪುರಸಭೆ ಪ್ರದೇಶಗಳಲ್ಲಿನ** ಗೃಹ ಬಳಕೆ ಗ್ರಾಹಕರಿಗೆ ಹಾಗೂ ಸರ್ಕಾರಿ/ಧರ್ಮಾರ್ಥ ಸಂಸ್ಥೆಗಳು ನಡೆಸುವ ವಿದ್ಯಾ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ಸ್ಥಾವರಗಳ ದರಗಳಲ್ಲಿ ಮಾಡಿರುವ ಒಟ್ಟಾರೆ ಹೆಚ್ಚಳ ಪ್ರತಿ ಯೂನಿಟ್ಟಿಗೆ 25 ಪೈಸೆ. 30 ಯೂನಿಟ್‌ಗಳವರೆಗಿನ ಮಾಸಿಕ ವಿದ್ಯುಚ್ಛಕ್ತಿಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.25 ಅನ್ನು ರೂ.3.50 ಕ್ಕೆ ಏರಿಸಲಾಗಿದೆ ಮತ್ತು 31 ರಿಂದ 100

ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.4.70 ಅನ್ನು ರೂ.4.95ಕ್ಕೆ ಏರಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ಪ್ರತಿ ಯೂನಿಟ್‌ನ ದರವಾದ ರೂ.6.25 ಅನ್ನು ರೂ.6.50ಕ್ಕೆ ಏರಿಸಲಾಗಿದೆ. 201ರಿಂದ 300 ಯೂನಿಟ್‌ಗಳವರೆಗಿನ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.7.30 ರಿಂದ ರೂ.7.55ಕ್ಕೆ ಹೆಚ್ಚಿಸಲಾಗಿದೆ. 301 ರಿಂದ 400 ಯೂನಿಟ್‌ಗಳವರೆಗಿನ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.7.35 ರಿಂದ ರೂ.7.60ಕ್ಕೆ ಹೆಚ್ಚಿಸಲಾಗಿದೆ. 400 ಯೂನಿಟ್‌ಗಳಿಗೆ ಮೇಲ್ಪಟ್ಟ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.7.40 ರಿಂದ ರೂ.7.65ಕ್ಕೆ ಹೆಚ್ಚಿಸಲಾಗಿದೆ.

ಬೆಸ್ಕಾಂ ವ್ಯಾಪ್ತಿಯ ಗ್ರಾಮ ಪಂಚಾಯಿತಿ ಅಡಿಯ ಗ್ರಾಮೀಣ ಪ್ರದೇಶದ ಗೃಹ ಬಳಕೆದಾರರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ.3.15 ಅನ್ನು ರೂ.3.40ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಈಗಿರುವ ದರವಾದ ಪ್ರತಿ ಯೂನಿಟ್‌ಗೆ ರೂ.4.40 ಅನ್ನು ರೂ.4.65ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ. 5.95 ರಿಂದ ರೂ. 6.20ಕ್ಕೆ ಹಾಗೂ 201 ರಿಂದ 300 ಯೂನಿಟ್‌ಗಳವರೆಗಿನ ವಿದ್ಯುಚ್ಛಕ್ತಿ ಬಳಕೆಯ ದರವನ್ನು ಪ್ರತಿ ಯೂನಿಟ್‌ಗೆ ರೂ.6.80 ರಿಂದ ರೂ.7.60ಕ್ಕೆ ಹಾಗೂ 300 ಯೂನಿಟ್ ಮೇಲ್ಪಟ್ಟ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.85 ರಿಂದ ರೂ.7.10ಕ್ಕೆ ಹೆಚ್ಚಿಸಲಾಗಿದೆ.

ಇತರೆ ಎಲ್ಲಾ ಎಸ್ಕಾಂಗಳ ನಗರ ಪಾಲಿಕೆ ಹಾಗೂ ಪುರಸಭೆ ಪ್ರದೇಶಗಳಲ್ಲಿನ ಗೃಹ ಬಳಕೆಯ ಗ್ರಾಹಕರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.25 ಅನ್ನು ರೂ.3.45ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.4.70 ಅನ್ನು ರೂ.4.95ಕ್ಕೆ ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.25 ರಿಂದ ರೂ.6.50ಕ್ಕೆ ಹಾಗೂ 200 ಯೂನಿಟ್‌ಗೆ ಮೇಲ್ಪಟ್ಟ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.7.30 ರಿಂದ ರೂ.7.55ಕ್ಕೆ ಹೆಚ್ಚಿಸಲಾಗಿದೆ.

ಇತರೆ ಎಲ್ಲಾ ಎಸ್ಕಾಂಗಳ ಗ್ರಾಮ ಪಂಚಾಯತಿಗಳ ಪ್ರದೇಶಗಳಲ್ಲಿನ ಗೃಹ ಬಳಕೆ ಗ್ರಾಹಕರಿಗೆ ಮೊದಲ 30 ಯೂನಿಟ್‌ಗಳವರೆಗಿನ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.3.15 ಅನ್ನು ರೂ.3.35ಕ್ಕೆ ಹಾಗೂ 31 ರಿಂದ 100 ಯೂನಿಟ್‌ಗಳವರೆಗಿನ ಬಳಕೆಗೆ ಪ್ರತಿ ಯೂನಿಟ್‌ಗೆ ಈಗಿರುವ ದರವಾದ ರೂ.4.40 ಅನ್ನು ರೂ.4.65ಕ್ಕೆ

ಹೆಚ್ಚಿಸಲಾಗಿದೆ. 101 ರಿಂದ 200 ಯೂನಿಟ್‌ಗಳವರೆಗಿನ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.5.95 ರಿಂದ ರೂ 6.20ಕ್ಕೆ ಹಾಗೂ 200 ಯೂನಿಟ್‌ಗೆ ಮೇಲ್ಪಟ್ಟ ಬಳಕೆಗೆ ದರವನ್ನು ಪ್ರತಿ ಯೂನಿಟ್‌ಗೆ ರೂ.6.80 ರಿಂದ ರೂ.7.05ಕ್ಕೆ ಹೆಚ್ಚಿಸಲಾಗಿದೆ.

**ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:**

ರಾಜ್ಯದ ಎಲ್ಲಾ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿನ ಏರಿಕೆ ಪ್ರತಿಯೂನಿಟ್‌ಗೆ 20 ಪೈಸೆಯಿಂದ 25 ಪೈಸೆಯವರೆಗೆ ಇರುತ್ತದೆ. ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ ಪುರಸಭೆಗಳ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಪರಿಷ್ಕೃತ ದರಗಳು ಮೊದಲ 500 ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 5.50 (ಈಗಿರುವ ದರ ರೂ. 5.25) ಹಾಗೂ 500 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.75 (ಈಗಿರುವ ದರ ರೂ.6.50) ಆಗುತ್ತದೆ.

ಇತರೆ ಎಸ್ಕಾಂಗಳ ವ್ಯಾಪ್ತಿಯ ಪುರಸಭೆ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರಗಳು–ಮೊದಲ 500 ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ. 5.30 (ಈಗಿರುವ ದರ ರೂ. 5.10), 501 ಯೂನಿಟ್‌ನಿಂದ 1000 ಯೂನಿಟ್‌ಗಳವರಗೆ ಪ್ರತಿ ಯೂನಿಟ್‌ಗೆ ರೂ.6.25 (ಈಗಿರುವ ದರ ರೂ.6.05) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.55 (ಈಗಿರುವ ದರ ರೂ. 6.35) ಆಗುತ್ತದೆ.

ಇತರೆ ಎಲ್ಲಾ ಪ್ರದೇಶಗಳಲ್ಲಿನ ಎಲ್.ಟಿ. ಕೈಗಾರಿಕಾ ಬಳಕೆದಾರರಿಗೆ ಹೊಸ ದರಗಳು–ಮೊದಲ 500 ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.5.20 (ಈಗಿರುವ ದರ ರೂ.5.00), 501 ಯೂನಿಟ್‌ನಿಂದ 1000 ಯೂನಿಟ್‌ಗಳವರೆಗೆ ಪ್ರತಿ ಯೂನಿಟ್‌ಗೆ ರೂ.6.10 (ಈಗಿರುವ ದರ ರೂ.5.90) ಹಾಗೂ 1000 ಯೂನಿಟ್‌ಗಳಿಗಿಂತ ಹೆಚ್ಚಾದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.40 (ಈಗಿರುವ ದರ ರೂ.6.20) ಆಗುತ್ತದೆ.

ರಾಜ್ಯದ ಎಲ್ಲಾ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿನ ಏರಿಕೆ ಪ್ರತಿ ಯೂನಿಟ್‌ಗೆ 20 ರಿಂದ 25 ಪೈಸೆಗಳಷ್ಟು ಇರುತ್ತದೆ. ಬೆಸ್ಕಾಂ ವ್ಯಾಪ್ತಿಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಇತರೆ ಪುರಸಭೆ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ವಿದ್ಯುಚ್ಛಕ್ತಿ

ಬಳಕೆಗೆ ಅನ್ವಯವಾಗುವ ಹೊಸ ದರ ಪ್ರತಿ ಯೂನಿಟ್‌ಗೆ ರೂ.6.90 (ಈಗಿರುವ ದರ ರೂ.6.65) ಹಾಗೂ ಒಂದು ಲಕ್ಷ ಯೂನಿಟ್‌ಗಳಿಗಿಂತ ಹೆಚ್ಚಾದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.20 (ಈಗಿರುವ ದರ ರೂ.6.95) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯಲ್ಲಿನ ಉಳಿದ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.80 (ಈಗಿರುವ ದರ ರೂ.6.60) ಹಾಗೂ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.00 (ಈಗಿರುವ ದರ ರೂ.6.80) ಆಗುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ಕೈಗಾರಿಕಾ ಬಳಕೆದಾರರಿಗೆ ಅನ್ವಯವಾಗುವ ಹೊಸ ದರ ಮೊದಲ ಒಂದು ಲಕ್ಷ ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.6.75 (ಈಗಿರುವ ದರ ರೂ.6.60) ಹಾಗೂ ಒಂದು ಲಕ್ಷಕ್ಕಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.00 (ಈಗಿರುವ ದರ ರೂ.6.80) ಆಗುತ್ತದೆ.

**ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳು:**

ಎಲ್.ಟಿ. ವಾಣಿಜ್ಯ ಪ್ರವರ್ಗದ ಬಳಕೆದಾರರಿಗೆ ದರ ಏರಿಕೆ ಪ್ರತಿ ಯೂನಿಟ್‌ಗೆ 25 ಪೈಸೆ ಇರುತ್ತದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರೆ ಪುರಸಭೆ ಪ್ರದೇಶಗಳನ್ನು ಒಳಗೊಂಡಂತೆ ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿನ ಹೊಸ ದರ, ಮೊದಲ 50 ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.75 (ಈಗಿರುವ ದರ ರೂ.7.50) ಹಾಗೂ 50 ಯೂನಿಟ್‌ಗಳು ಮೀರಿದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.75 (ಈಗಿರುವ ದರ ರೂ.8.50) ಆಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿನ ಹೊಸ ದರ, ಮೊದಲ 50 ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.25 (ಈಗಿರುವ ದರ ರೂ.7.00) ಹಾಗೂ 50 ಯೂನಿಟ್‌ಗಳು ಮೀರಿದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.25 (ಈಗಿರುವ ದರ ರೂ.8.00) ಆಗುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ಇತರೆ ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 25ಪೈಸೆಗಳ ಏರಿಕೆಯಾಗಿರುತ್ತದೆ. ಮೊದಲ 2 ಲಕ್ಷ ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ

ರೂ.8.70 (ಈಗಿರುವ ದರ ರೂ.8.45) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.80 (ಈಗಿರುವ ದರ ರೂ.8.55) ಆಗುತ್ತದೆ.

ಬೆಸ್ಕಾಂ ವ್ಯಾಪ್ತಿಯ ಇತರೆ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 25 ಪೈಸೆಗಳ ಏರಿಕೆಯಾಗಿರುತ್ತದೆ. ಹೊಸ ದರ, ಮೊದಲ 2 ಲಕ್ಷ ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.50 (ಈಗಿರುವ ದರ ರೂ.8.25) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.60 (ಈಗಿರುವ ದರ ರೂ. 8.35) ಆಗುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಇತರೆ ಎಲ್ಲಾ ಪ್ರದೇಶಗಳಲ್ಲಿನ ಹೆಚ್.ಟಿ. ವಾಣಿಜ್ಯ ಬಳಕೆದಾರರಿಗೆ ಅನ್ವಯವಾಗುವ ವಿದ್ಯುಚ್ಛಕ್ತಿ ದರಗಳಲ್ಲಿ ಪ್ರತಿ ಯೂನಿಟ್‌ಗೆ 20 ಪೈಸೆಗಳ ಏರಿಕೆಯಾಗಿರುತ್ತದೆ. ಹೊಸ ದರ, ಮೊದಲ 2 ಲಕ್ಷ ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.45 (ಈಗಿರುವ ದರ ರೂ.8.25) ಹಾಗೂ 2 ಲಕ್ಷ ಯೂನಿಟ್‌ಗಳಿಗಿಂತ ಮೇಲ್ಪಟ್ಟ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.55 (ಈಗಿರುವ ದರ ರೂ. 8.35) ಆಗುತ್ತದೆ.

**ಕುಡಿಯುವ ನೀರು ಸರಬರಾಜು ಮತ್ತು ಬೀದಿ ದೀಪ:**

ಆಯೋಗವು ಕುಡಿಯುವ ನೀರು ಸರಬರಾಜು ಮಾಡುವ ಎಲ್.ಟಿ. ಸ್ಥಾವರಗಳಲ್ಲಿ ಬಳಸಲಾಗುವ ವಿದ್ಯುಚ್ಛಕ್ತಿಗೆ ದರವನ್ನು ಪ್ರತಿ ಯೂನಿಟ್‌ಗೆ ಈಗಿರುವ ರೂ.4.25 ರಿಂದ ರೂ.4.40ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್‌ಗೆ 15 ಪೈಸೆಯಷ್ಟು ಕನಿಷ್ಠ ಏರಿಕೆ ಮಾಡಿರುತ್ತದೆ. ಹೆಚ್.ಟಿ ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ ಕೂಡ ಪ್ರತಿ ಯೂನಿಟ್‌ಗೆ ಈಗಿರುವ ದರವನ್ನು ರೂ.4.85 ರಿಂದ ರೂ.5.00ಕ್ಕೆ ನಿಗದಿಪಡಿಸಿ, ಪ್ರತಿ ಯೂನಿಟ್‌ಗೆ 15 ಪೈಸೆಗಳ ಏರಿಕೆ ಮಾಡಿರುತ್ತದೆ.

**ಎಲ್.ಇ.ಡಿ. / ಇಂಡಕ್ಷನ್ ಬೀದಿ ದೀಪಗಳಿಗೆ ರಿಯಾಯಿತಿ ವಿದ್ಯುತ್ ದರ:**

ಆಯೋಗವು, ಬೀದಿದೀಪ ಸ್ಥಾವರಗಳಿಗೆ ಮಿತ ವಿದ್ಯುತ್ ಬಳಸುವ ಎಲ್.ಇ.ಡಿ. / ಇಂಡಕ್ಷನ್ ಬಲ್ಬ್‌ಗಳನ್ನು ಅಳವಡಿಸುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ನಗರ ಮತ್ತು ಗ್ರಾಮೀಣ ಸ್ಥಳಿಯ ಸಂಸ್ಥೆಗಳಿಗೆ ರೂ.1/–ರ ರಿಯಾಯಿತಿ ಕೊಟ್ಟು, ಪ್ರತಿ ಯೂನಿಟ್‌ಗೆ ರೂ.5.10ರ ಪರಿಷ್ಕೃತ ಪ್ರೋತ್ಸಾಹ ದರವನ್ನು ನೀಡಿರುತ್ತದೆ. ಇತರೆ ಬೀದಿ ದೀಪ ಸ್ಥಾವರಗಳಿಗೆ ಅನ್ವಯವಾಗುವ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.10 (ಈಗಿರುವ ದರ ರೂ.5.85) ಆಗುತ್ತದೆ.

## ವಿದ್ಯಾ ಸಂಸ್ಥೆಗಳು ಹಾಗೂ ಆಸ್ಪತ್ರೆಗಳು:

ಆಯೋಗವು, ಎಲ್.ಟಿ. ಪ್ರವರ್ಗದಡಿ ಬರುವ ಖಾಸಗಿ ವಿದ್ಯಾಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳಿಗೆ ವಿದ್ಯುಚ್ಛಕ್ತಿ ದರಗಳನ್ನು ಪ್ರತಿ ಯೂನಿಟ್‌ಗೆ 20 ರಿಂದ 25 ಪೈಸೆಗಳವರೆಗೆ ಹೆಚ್ಚಿಸಿದೆ. ಬೆಸ್ಕಾಂ ವ್ಯಾಪ್ತಿಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪುರಸಭೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.6.75 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.50) ಹಾಗೂ 200 ಯೂನಿಟ್‌ಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.8.00 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.75). ಇತರೆ ಎಲ್ಲಾ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಮಾಸಿಕ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.20 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.5.95) ಹಾಗೂ 200 ಯೂನಿಟ್‌ಗಳ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.45 ದರ (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.20) ಆಗುತ್ತದೆ.

ಇತರೆ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯ ಪುರಸಭೆ ಹಾಗೂ ನಗರ ಸ್ಥಳಿಯ ಸಂಸ್ಥೆಗಳ ಪ್ರದೇಶಗಳಲ್ಲಿನ ಎಲ್.ಟಿ. ಪ್ರವರ್ಗಕ್ಕೆ ಮೊದಲ 200 ಯೂನಿಟ್‌ಗಳ ಮಾಸಿಕ ಬಳಕೆಗೆ ಪ್ರತಿ ಯೂನಿಟ್‌ಗೆ ಪರಿಷ್ಕೃತ ದರ ರೂ.6.70 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.50) ಹಾಗೂ 200 ಯೂನಿಟ್‌ಗಿಂತ ಹೆಚ್ಚಿನ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.95 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.75) ಆಗುತ್ತದೆ. ಇತರೆ ಎಲ್ಲಾ ಪ್ರದೇಶಗಳಲ್ಲಿ ಮೊದಲ 200 ಯೂನಿಟ್‌ಗಳ ಮಾಸಿಕ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.15 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.5.95) ಹಾಗೂ 200 ಯೂನಿಟ್‌ಗಳ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.40 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.20) ಆಗುತ್ತದೆ.

ಹೆಚ್.ಟಿ. ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಬೆಸ್ಕಾಂ ವ್ಯಾಪ್ತಿಯಲ್ಲಿನ ಸರ್ಕಾರಿ ಆಸ್ಪತ್ರೆಗಳು ಮತ್ತು ಧರ್ಮಾರ್ಥ ಸಂಸ್ಥೆಗಳು ನಡೆಸುವ ಆಸ್ಪತ್ರೆಗಳು ಹಾಗೂ ಸರ್ಕಾರಿ ವಿದ್ಯಾ ಸಂಸ್ಥೆಗಳು ಮತ್ತು ಅನುದಾನಿತ ವಿದ್ಯಾ ಸಂಸ್ಥೆಗಳ ಮೊದಲ ಒಂದು ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಮಾಸಿಕ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.65 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.40) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.05 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.80) ಆಗುತ್ತದೆ. ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ಪ್ರದೇಶಗಳಲ್ಲಿ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.6.60 (ಈಗಿರುವ

ದರ ಪ್ರತಿ ಯೂನಿಟ್‌ಗೆ ರೂ.6.40) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.7.00 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.6.80) ಆಗುತ್ತದೆ.

ಹೆಚ್.ಟಿ ಪ್ರವರ್ಗದಲ್ಲಿ ವಿದ್ಯುಚ್ಛಕ್ತಿ ಪಡೆಯುವ ಬೆಸ್ಕಾಂ ವ್ಯಾಪ್ತಿಯಲ್ಲಿನ ಖಾಸಗಿ ವಿದ್ಯಾ ಸಂಸ್ಥೆಗಳು ಹಾಗೂ ಖಾಸಗಿ ಆಸ್ಪತ್ರೆಗಳ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.7.65 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.40) ಹಾಗೂ ಒಂದು ಲಕ್ಷಕ್ಕಿಂತ ಹೆಚ್ಚಿನ ಯೂನಿಟ್‌ಗಳ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.05 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.80) ಆಗುತ್ತದೆ. ಇತರೆ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿ ಪ್ರದೇಶಗಳಲ್ಲಿ ಮೊದಲ ಒಂದು ಲಕ್ಷ ಯೂನಿಟ್ ಮಾಸಿಕ ವಿದ್ಯುಚ್ಛಕ್ತಿ ಬಳಕೆಗೆ ಪರಿಷ್ಕೃತ ದರ ಪ್ರತಿ ಯೂನಿಟ್‌ಗೆ ರೂ.7.60 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.40) ಹಾಗೂ ಒಂದು ಲಕ್ಷ ಯೂನಿಟ್‌ಗಳ ನಂತರದ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿ ಯೂನಿಟ್‌ಗೆ ರೂ.8.00 (ಈಗಿರುವ ದರ ಪ್ರತಿ ಯೂನಿಟ್‌ಗೆ ರೂ.7.80) ಆಗುತ್ತದೆ.

**ಹಸಿರು ದರ (Green Tariff):**

ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸುವ ವಿದ್ಯುಚ್ಛಕ್ತಿಯ ಖರೀದಿ ಮತ್ತು ಉಪಯೋಗವನ್ನು ಉತ್ತೇಜಿಸಲು ಹೆಚ್.ಟಿ. ಕೈಗಾರಿಕೆ ಮತ್ತು ಹೆಚ್.ಟಿ. ವಾಣಿಜ್ಯ ಗ್ರಾಹಕರಿಗೆ ಅವರು ಇಚ್ಛಿಸಿದಲ್ಲಿ ಅವರಿಗೆ ಅನ್ವಯವಾಗುವ ದರಕ್ಕಿಂತ ಪ್ರತಿ ಯೂನಿಟ್‌ಗೆ 50 ಪೈಸೆಯಷ್ಟು ಹೆಚ್ಚಿನ ಹಸಿರುದರವನ್ನು ಮುಂದುವರೆಸಿದೆ.

**ಸರ್ಕಾರದ ಸಹಾಯಧನ:**

10 ಹೆಚ್.ಪಿ. ವರೆಗಿನ ಸಾಮರ್ಥ್ಯದ 27.17 ಲಕ್ಷ ನೀರಾವರಿ ಪಂಪ್‌ಸೆಟ್‌ಗಳಿಗೆ ಹಾಗೂ 28.42 ಲಕ್ಷ ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗೆ, ಉಚಿತ ವಿದ್ಯುತ್ ಸರಬರಾಜಿಗಾಗಿ ವಿದ್ಯುತ್ ಸರಬರಾಜು ಕಂಪನಿಗಳಿಗೆ, 2017–18ನೇ ಸಾಲಿಗೆ ಸರ್ಕಾರ ಕೊಡಬೇಕಾದ ಸಹಾಯಧನದ ಮೊತ್ತವಾದ ರೂ.10047.76 ಕೋಟಿಗಳ ಪ್ರತಿಯಾಗಿ 2018–19ನೇ ಸಾಲಿನಲ್ಲಿ ಕೊಡಬೇಕಾದ ಅಂದಾಜು ಮೊತ್ತ ರೂ.11048.37 ಕೋಟಿಗಳು. ಆರ್ಥಿಕ ವರ್ಷ 2019 ರಲ್ಲಿ ನೀರಾವರಿ ಪಂಪ್‌ಸೆಟ್‌ಗಳು ಮತ್ತು ಭಾಗ್ಯಜ್ಯೋತಿ / ಕುಟೀರಜ್ಯೋತಿ ಗ್ರಾಹಕರ ಅಂದಾಜು ಬಳಕೆ 21413 ದಶಲಕ್ಷ ಯೂನಿಟ್‌ಗಳು.

## ವಿದ್ಯುತ್ ಸರಬರಾಜು ಕಂಪನಿಗಳ 2018–19ನೇ ಸಾಲಿನ ವಾರ್ಷಿಕ ಕಂದಾಯ ಬೇಡಿಕೆ(ARR):

ವಿದ್ಯುತ್ ಸರಬರಾಜು ಕಂಪನಿಗಳು 2018–19ನೇ ಸಾಲಿಗೆ ಸಲ್ಲಿಸಿದ ದರ ಅರ್ಜಿಗಳನ್ನು ಕೂಲಂಕುಷವಾಗಿ ಪರೀಶೀಲಿಸಿದ ನಂತರ ಆಯೋಗವು, ಆರ್ಥಿಕ ವರ್ಷ 2019 ರಲ್ಲಿ 57465 ದಶಲಕ್ಷ ಯೂನಿಟ್‌ಗಳಷ್ಟು (ಶೇ.16.23ರಷ್ಟು ವಿದ್ಯುತ್ ಪ್ರಸರಣ ಮತ್ತು ವಿತರಣಾ ನಷ್ಟ ಹೊರತುಪಡಿಸಿದಂತೆ) ಸರಬರಾಜು ಮಾಡಲಿರುವ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಿಗೆ ಒಟ್ಟು ರೂ.38774.59 ಕೋಟಿಗಳ, ಒಟ್ಟಾರೆ ಖರ್ಚು (ವಾರ್ಷಿಕ ಕಂದಾಯ ಬೇಡಿಕೆ) ಅನ್ನು ಅನುಮೋದಿಸಿದೆ.

2017–18ನೇ ಸಾಲಿಗೆ ಅನುಮೋದಿಸಿದ 65576 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಖರೀದಿಗೆ ಪ್ರತಿಯಾಗಿ 2018–19ರ ಸಾಲಿನಲ್ಲಿ 68266 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿಯನ್ನು (ಶೇಕಡಾ 4.10ರ ಏರಿಕೆ) ವಿದ್ಯುತ್ ಸರಬರಾಜು ಕಂಪನಿಗಳು ಖರೀದಿ ಮಾಡಲಿವೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಆರ್ಥಿಕ ವರ್ಷ 2018–19ಕ್ಕೆ ವಾರ್ಷಿಕ ಕಂದಾಯ ಬೇಡಿಕೆಯಾದ ರೂ.19236 ಕೋಟಿಗಳೊಂದಿಗೆ ರಾಜ್ಯದ ಒಟ್ಟು ವಿದ್ಯುಚ್ಛಕ್ತಿ ಖರೀದಿಯ ಶೇ.49 ರಷ್ಟು ಪ್ರಮಾಣದ 33261 ದಶಲಕ್ಷ ಯೂನಿಟ್‌ಗಳ ವಿದ್ಯುತ್‌ನ್ನು ಖರೀದಿಸಲಿದೆ.

ವಿದ್ಯುತ್ ಸರಬರಾಜು ಕಂಪನಿಗಳು ಮತ್ತು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘವು, ವಿದ್ಯುತ್ ಖರೀದಿ ವೆಚ್ಚದಲ್ಲಿ ಒಟ್ಟಾರೆ ಏರಿಕೆ ಮತ್ತು ಕಾರ್ಯಾಚರಣೆ ವೆಚ್ಚಗಳಲ್ಲಿ ಏರಿಕೆ ಉಲ್ಲೇಖಿಸಿ, ಆರ್ಥಿಕ ವರ್ಷ 2017ರ ವಾರ್ಷಿಕ ಕಾರ್ಯ ನಿರ್ವಹಣೆ ಪುನರ್ಮನನ ಮತ್ತು 2018–19ನೇ ಸಾಲಿಗೆ ಪರಿಷ್ಕೃತ ದರಗಳ ಪ್ರಸ್ತಾವನೆಗಳೊಂದಿಗೆ ಆರ್ಥಿಕ ವರ್ಷ 2018–19ರ ವಾರ್ಷಿಕ ಕಂದಾಯ ಬೇಡಿಕೆಗೆ ಆಯೋಗದ ಅನುಮೋದನೆಗಾಗಿ ಅರ್ಜಿಗಳನ್ನು ಸಲ್ಲಿಸಿದ್ದವು. 2018–19ನೇ ಸಾಲಿಗೆ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ (ARR) (ಆರ್ಥಿಕ ವರ್ಷ 2017ರ ಮುಂದೊಯ್ದು ಕೊರತೆಯನ್ನು ಸೇರಿದಂತೆ), ಈ ಕೆಳಕಂಡಂತೆ ಇವೆ:

***2018–19ನೇ ಸಾಲಿನ ಪ್ರಸ್ತಾವಿತ ಮತ್ತು ಅನುಮೋದಿತ ವಾರ್ಷಿಕ ಕಂದಾಯ ಬೇಡಿಕೆ***

*(ರೂ. ಕೋಟಿಗಳಲ್ಲಿ)*

| ವಿದ್ಯುತ್ ಸರಬರಾಜು ಪರವಾನಿಗೆದಾರ | ಸಲ್ಲಿಸಿದಂತೆ | ಅನುಮೋದಿಸಿದಂತೆ |
|---|---|---|
| ಬೆಸ್ಕಾಂ | 19680.34 | 19236.16 |
| ಮೆಸ್ಕಾಂ | 3818.75 | 3245.7 |
| ಸೆಸ್ಕ್ | 4952.71 | 4129.32 |
| ಹೆಸ್ಕಾಂ | 8510.48 | 7279.54 |
| ಜೆಸ್ಕಾಂ | 5729.03 | 4707.08 |
| ಹುಕ್ಕೇರಿ ಆರ್.ಇ.ಸಿ.ಎಸ್. | 212.28 | 176.79 |
| ಒಟ್ಟು | **42903.59** | **38774.59** |

**ಆರ್ಥಿಕ ವರ್ಷ 2019 ರ ಕಂದಾಯ ಕೊರತೆ:**

ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಹಾಗೂ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಆರ್ಥಿಕ ವರ್ಷ 2017ರ ವಾರ್ಷಿಕ ಕಾರ್ಯ ನಿರ್ವಹಣಾ ಪುನರ್ಮನನದಲ್ಲಿ ರೂ.2511 ಕೋಟಿ ಕಂದಾಯ ಕೊರತೆಯನ್ನು ಆಯೋಗವು ನಿರ್ಧರಿಸಿದೆ. ಸದರಿ ಕಂದಾಯ ಕೊರತೆಯೊಂದಿಗೆ ಆರ್ಥಿಕ ವರ್ಷ 2019ಕ್ಕೆ ಅಂದಾಜಿಸಿದ ಕಂದಾಯ ಹೆಚ್ಚಳ ಕೊರತೆ ರೂ.558.53 ಕೋಟಿಗಳನ್ನು ಗಣನೆಗೆ ತೆಗೆದುಕೊಂಡ ನಂತರ ಒಟ್ಟಾರೆ ಕೊರತೆ ರೂ.1952.70 ಕೋಟಿಯಾಗಿದ್ದು, ಅದನ್ನು ಆರ್ಥಿಕ ವರ್ಷ 2019ರಲ್ಲಿ ದರ ಹೆಚ್ಚಳದಿಂದ ವಸೂಲು ಮಾಡಬೇಕಿದೆ.

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆ.ಪಿ.ಟಿ.ಸಿ.ಎಲ್) 2018-19ರ ವಿದ್ಯುತ್ ಪ್ರಸರಣ ದರ:**

ಆಯೋಗವು ಆರ್ಥಿಕ ವರ್ಷ 2017ರ ವಾರ್ಷಿಕ ಕಾರ್ಯನಿರ್ವಹಣಾ ಪುನರ್ಮನನದ ಅನುಸಾರ ಮುಂದೊಯ್ದ ರೂ.496.69 ಕೋಟಿ ಹೆಚ್ಚುವರಿಯನ್ನು ಸೇರಿಸಿಕೊಂಡು 2019ನೇ ಸಾಲಿಗೆ ರೂ.2975.91 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ಅನುಮೋದಿಸಿದೆ. 2017-18ರ ಸಾಲಿಗೆ ಆಯೋಗ ಅನುಮೋದಿಸಿದ್ದ ಕ.ವಿ.ಪ್ರ.ನಿ.ನಿ.ಕ್ಕೆ ಪಾವತಿಸಬೇಕಾದ ಪ್ರಸರಣ ದರವಾದ ರೂ.1,11,558 (ಪ್ರತಿ ಮೆ.ವ್ಯಾ./ತಿಂಗಳಿಗೆ )ಗಳ ಪ್ರತಿಯಾಗಿ ಪ್ರಸರಣ ದರವನ್ನು ಆರ್ಥಿಕ ವರ್ಷ 2018-19ಕ್ಕೆ ಪ್ರತಿ ಮೆ.ವ್ಯಾ./ತಿಂಗಳಿಗೆ ರೂ. 1,15,776 ಆಗಲಿದೆ. ಆರ್ಥಿಕ ವರ್ಷ 2018-19ರ ಈ ಪರಿಷ್ಕೃತ ಪ್ರಸರಣ ದರ ವಿದ್ಯುತ್ ಕಂಪನಿಗಳಿಗೆ ಅನುಮೋದಿಸಿದ ವಿದ್ಯುತ್ ಖರೀದಿ ವೆಚ್ಚ ಮತ್ತು ವಿದ್ಯುತ್ ದರ ಪರಿಷ್ಕರಣೆಯಲ್ಲಿ ಸೇರಿರುತ್ತದೆ.

**ಮಂಗಳೂರು ಮತ್ತು ಏಕಸ್ (AEQUS) ವಿಶೇಷ ಆರ್ಥಿಕ ವಲಯ (SEZ)ಗಳಿಗೆ ವಾರ್ಷಿಕ ಕಂದಾಯ ಬೇಡಿಕೆ (ARR) ಮತ್ತು ವಿದ್ಯುಚ್ಛಕ್ತಿ ದರ ನಿರ್ಧರಣೆ:**

ಆಯೋಗವು, ಆರ್ಥಿಕ ವರ್ಷ 2019ಕ್ಕೆ ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ ರೂ.42.14 ಕೋಟಿಗಳ ಮತ್ತು ಏಕಸ್ (AEQUS) ವಿಶೇಷ ಆರ್ಥಿಕ ವಲಯಕ್ಕೆ ರೂ.14.83 ಕೋಟಿಗಳ ವಾರ್ಷಿಕ ಕಂದಾಯ ಬೇಡಿಕೆಯನ್ನು ನಿರ್ಧರಿಸಿದೆ. ಮಂಗಳೂರು ವಿಶೇಷ ಆರ್ಥಿಕ ವಲಯ ಕೈಗಾರಿಕಾ ಗ್ರಾಹಕರಿಗೆ ಪ್ರತಿ ಯೂನಿಟ್‌ಗೆ ರೂ.6.85 ಹಾಗೂ ಏಕಸ್

(AEQUS) ವಿಶೇಷ ಆರ್ಥಿಕ ವಲಯ ಪ್ರತಿ ಯೂನಿಟ್‌ಗೆ ರೂ.6.50 ಪರಿಷ್ಕೃತ ಚಿಲ್ಲರೆ ವಿದ್ಯುತ್ ದರಗಳನ್ನು ನಿಗದಿಪಡಿಸಿದೆ.

*****

| |
|---|
| **ಟಿಪ್ಪಣಿ: ಪ್ರತಿ ಬಳಕೆದಾರರ ಪ್ರವರ್ಗಕ್ಕೆ ಸಂಬಂಧಿಸಿದ ಪರಿಷ್ಕೃತ ವಿದ್ಯುತ್‌ದರ ವಿವರಗಳನ್ನು ಲಗತ್ತಿಸಿದೆ ಹಾಗೂ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಿದ್ಯುತ್ ಸರಬರಾಜು ಕಂಪನಿಗಳು, ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ,MSEZ, ಮತು AEQUS SEZಗಳಿಗೆ ಸಂಬಂಧಿಸಿದ ದರ ಪರಿಷ್ಕರಣಆದೇಶಗಳ ಸಂಪೂರ್ಣ ವಿವರಗಳನ್ನು ಆಯೋಗದ ವೆಬ್‌ಸೈಟ್www.karnataka.gov.in/kerc ನಲ್ಲಿ ಪ್ರಕಟಿಸಲಾಗಿದೆ** |